C.C No. 956/2024
PW- 1

<u>ಪಾಟೀ ಸವಾಲುಃ  ಆರೋಪಿ ಪರ ಶ್ರೀ.ಎಸ್.ಎಸ್.ಜೆ.  ವಕೀಲರಿಂದ</u>

ಆರೋಪಿತ ನನಗೆ ನನ್ನ ಮಾವನವರ ಮುಖಾಂತರ ಪರಿಚಯ ಆಗಿರುತ್ತಾನೆ.  ನನಗೆ ಆರೋಪಿತನ ಆದಾಯದ ಬಗ್ಗೆ ಮಾಹಿತಿ ಇಲ್ಲ. ನಾನು ಸರಕಾರಿ ಶಾಲೆಯಲ್ಲಿ ಅಧ್ಯಾಪಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.  ನಾನು ನನ್ನ ಫಿರ್ಯಾದಿಯಲ್ಲಿ ನಾನು ಸರಕಾರಿ ಶಿಕ್ಷಕ ಎಂದು ನಮೂದು ಮಾಡಿಲ್ಲ ಎಂದರೆ ಸಾಕ್ಷಿ ನಾನು ಸರಕಾರಿ ನೌಕರ ಎಂದು ನಮೂದು ಮಾಡಿದ್ದೇನೆ ಎಂದು ನುಡಿಯುತ್ತಾರೆ.  ನಾನು ನನ್ನ ತಿಂಗಳ ಆದಾಯದ ಬಗ್ಗೆ ನಮೂದು ಮಾಡಿಲ್ಲ ಎಂದರೆ ಸರಿ.  ನಾನು ಬೇರೆ ಬೇರೆ ಬ್ಯಾಂಕ್ ಗಳಲ್ಲಿ 3 ಖಾತೆಗಳನ್ನು ಹೊಂದಿರುತ್ತೇನೆ.   ನನ್ನ ಖಾತೆಗಳು ಕೆನರಾ ಬ್ಯಾಂಕ್, ಎಸ್.ಬಿ.ಐ ಮತ್ತು ಪಿ.ಕೆ.ಜಿ. ಬ್ಯಾಂಕ್ ನಲ್ಲಿವೆ.  ನಾನು ಯಾವುದೇ ಸಾಲದ ಖಾತೆ ಹೊಂದಿಲ್ಲ.

ನಿಮ್ಮ ಫಿರ್ಯಾದಿಯಲ್ಲಿ ಆರೋಪಿತನಿಗೆ ಯಾವ ರೀತಿಯಲ್ಲಿ ಹಣ ನೀಡಿದ್ದೀರಿ ಎಂದು ನಮೂದು ಮಾಡಿಲ್ಲ ಎಂದರೆ ಸಾಕ್ಷಿ ಕೈಗಡ ಹಣ ನೀಡಿದ್ದೇನೆಂದು ನಮೂದು ಮಾಡಿದ್ದೇನೆಂದು ನುಡಿಯುತ್ತಾರೆ.  ನಾನು ಸದರಿ ಹಣವನ್ನು ಆರೋಪಿತನಿಗೆ ನಗದು ರೂಪದಲ್ಲಿ ನೀಡಿರುತ್ತೇನೆ.   ನೀವು ಆರೋಪಿತನಿಗೆ ಯಾವುದೇ ಹಣ ನೀಡಿಲ್ಲ ಎಂದರೆ ಸರಿಯಲ್ಲ.

ನಿಪಿ-1 ಚೆಕ್ ನ್ನು ಯಾರು ಯಾವಾಗ ಯಾರ ಸಮಕ್ಷಮ ಮತ್ತು ಎಲ್ಲಿ ನೀಡಿದ್ದಾರೆಂದು ನಿಮ್ಮ ಪಿರ್ಯಾದಿಯಲ್ಲಿ ನಮೂದು ಮಾಡಿಲ್ಲ ಎಂದರೆ ಸರಿಯಲ್ಲ.  ನಿಪಿ-1 ಚೆಕ್ ನ್ನು ಆರೋಪಿತ ತಾನೇ ತುಂಬಿ ನೀಡಿದ್ದ.  ನಿಪಿ-1 ಚೆಕ್ ನಲ್ಲಿ ಚೆಕ್ ನಲ್ಲಿ ಬೇರೆ ಬೇರೆಯವರ ಬರವಣಿಗೆ ಮತ್ತು ಬೇರೆ ಬೇರೆ ಶಾಯಿ ಉಪಯೋಗಿಸಿ ಬರೆದಂತೆ ಕಂಡು ಬರುತ್ತದೆ ಎಂದರೆ ಸರಿಯಲ್ಲ.  ನೀವು ಮತ್ತು ನಿಮ್ಮ ಮಾವ ಸೇರಿ ಖೊಟ್ಟೆ ನಿಪಿ-1 ಚೆಕ್ ನ್ನು ತಯಾರಿಸಿದ್ದೀರಿ ಎಂದರೆ ಸರಿಯಲ್ಲ.  ನಾನು ನನ್ನ ಆದಾಯ ತೆರಿಗೆಯನ್ನು ಕಟ್ಟುತ್ತೇನೆ.  ನಾನು ನನ್ನ ಆದಾಯ ತೆರಿಗೆಯಲ್ಲಿ ಆರೋಪಿತನಿಗೆ ಹಣ ನೀಡಿದ ಬಗ್ಗೆ ನಮೂದು ಮಾಡಿರುತ್ತೇನೆ.  ನೀವು ಶಿಕ್ಷಕರಾದ ಕಾರಣ ಸರಕಾರ ನಿಯಮಗಳ ಪ್ರಕಾರ ನೀವು ಯಾವುದೇ ಬಡ್ಡಿ ವ್ಯವಹಾರ ಮಾಡಬಾರದು ಎಂದರೆ ಸರಿ.  ನೀವು ಆರೋಪಿತನಿಗೆ ಹಣ ನೀಡಿದ ಬಗ್ಗೆ ಯಾವುದೇ ದಾಖಲೆಗಳಿಲ್ಲ ಎಂದರೆ ಸರಿಯಲ್ಲ.  ನಾನು ಸದರಿ ದಾಖಲೆಯನ್ನು ಈ ಪ್ರಕರಣದಲ್ಲಿ ಹಾಜರುಪಡಿಸಿಲ್ಲ.

ನೀವು ಆರೋಪಿತನಿಗೆ ಹಣ ನೀಡಿದ ಬಗ್ಗೆ ಇದೇ ಪ್ರಥಮ ಬಾರಿಗೆ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ನಾನು ಆರೋಪಿತನಿಗೆ ನನ್ನ ಆದಾಯದಿಂದ ಹಣ ನೀಡಿರುತ್ತೇನೆ. ನೀವು ನಿಮ್ಮ ಆದಾಯದಿಂದ ಹಣ ನೀಡಿದ ಬಗ್ಗೆ ನಿಮ್ಮ ಪಿರ್ಯಾದಿಯಲ್ಲಿ ನಮೂದು ಮಾಡಿಲ್ಲ ಎಂದರೆ ಸರಿ. ನನ್ನ ಕುಟುಂಬದಲ್ಲಿ ನನಗೆ ಒಬ್ಬಳು ಹೆಂಡತಿ ಮತ್ತು ಇಬ್ಬರು ಮಕ್ಕಳು ಇದ್ದಾರೆ. 2023ರಲ್ಲಿ ನನಗೆ ಎಷ್ಟು ಸಂಬಳ ಇತ್ತು ಎಂದು ಈಗ ನೆನಪಿಲ್ಲ. ನಾನು ಪ್ರತಿ ತಿಂಗಳು 30 ರಿಂದ 35 ಸಾವಿರ ರೂಪಾಯಿ ಉಳಿತಾಯ ಮಾಡುತ್ತೇನೆ. ನೀವು ಸರಕಾರಿ ನೌಕರರಾದ ಕಾರಣ ನೀವು ಕಳುಹಿಸಿದ ಲೀಗಲ್ ನೋಟೀಸ್ ನಲ್ಲಿ ಆರೋಪಿತನ ವಿರುದ್ಧ NI Act ಅಡಿಯಲ್ಲಿ ಕ್ರಮ ತೆಗೆದುಕೊಳ್ಳುತ್ತೇನೆಂದು ನಮೂದು ಮಾಡಿಲ್ಲ ಎಂದರೆ ಸರಿಯಲ್ಲ. ನೀವು ಆರೋಪಿತನೊಂದಿಗೆ ಯಾವುದೇ ಪರಿಚಯ ಇಲ್ಲದೆ ಸುಳ್ಳು ಪ್ರಕರಣ ಹೂಡಿದ್ದೀರಿ ಎಂದರೆ ಸರಿಯಲ್ಲ. ನೀವು ಆರೋಪಿತನಿಗೆ ನೇರವಾಗಿ ಪರಿಚಯ ಇಲ್ಲದಿದ್ದ ಕಾರಣ ನೀವು ಆರೋಪಿತನಿಗೆ ಯಾವುದೇ ಹಣ ನೀಡಿಲ್ಲ ಎಂದರೆ ಸರಿಯಲ್ಲ. ಆರೋಪಿತ ನಿಮಗೆ ನಿಪಿ-1ರಂತೆ ಯಾವುದೇ ಚೆಕ್ ನೀಡಿಲ್ಲ ಎಂದರೆ ಸರಿಯಲ್ಲ. ನೀವು ಆರೋಪಿತನಿಗೆ ಯಾವುದೇ ನೋಟೀಸ್ ನೀಡಿಲ್ಲ ಎಂದರೆ ಸರಿಯಲ್ಲ. ನೀವು ಸುಳ್ಳು ಪ್ರಮಾಣ ಪತ್ರವನ್ನು ನ್ಯಾಯಾಲಯದಲ್ಲಿ ನೀಡಿದ್ದೀರಿ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು )

ಓ. ಹೇ ಕೇ.ಸರಿ ಇದೆ.

ಸಿವಿಲ್ & J.M.F.C ನ್ಯಾಯಾಧೀಶರು,

ಚಿತ್ತಾಪೂರ.